ಪ್ರಾಥಮಿಕ ಶಾಲೆಗಳಲ್ಲಿ ಕ್ರೀಡಾ ಕಡ್ಡಾಯ.

1605(2337) ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) :— ಮಾನ್ಯ ಕನ್ನಡ ಮತ್ತು ಸಂಸ್ಕೃತಿ, ಯುವಜನ ಸೇವಾ ಮತ್ತು ಕ್ರೀಡಾ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1999-2000ನೇ ಸಾಲಿನಲ್ಲಿ ಯುವಜನ ಸೇವೆ ಮತ್ತು ಕ್ರೀಡೆಗೆ ರಾಜ್ಯದ ಆಯವ್ಯಯದಲ್ಲಿ ಎಷ್ಟು ಹಣ ತೆಗೆದಿರಿಸಲಾಗಿದೆ? ಈ ಹಣದಲ್ಲಿ ಗ್ರಾಮಾಂತರ ಪ್ರದೇಶಗಳ ಕ್ರೀಡಾಭಿವೃದ್ಧಿಗೆ ಎಷ್ಟು ಹಣ ಖರ್ಚು ಮಾಡಲಾಗಿದೆ

ಆ) ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಕ್ರೀಡೆಯನ್ನು ಕಡ್ಡಾಯ ಮಾಡಬೇಕೆನ್ನುವ ಆಲೋಚನೆ ಸರ್ಕಾರದ ಮುಂದಿದೆಯೇ?

ಇ) ಹಾಗಿದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ, ಯುವಜನ ಸೇವಾ ಮತ್ತು ಕ್ರೀಡಾ ಸಚಿವೆಯರು) :—

ಅ) 1999-2000ನೇ ಸಾಲಿನ ಆಯವ್ಯಯದಲ್ಲಿ ರೂ.620.00 ಲಕ್ಷಗಳನ್ನು ಯೋಜನೆಯಡಿಯಲ್ಲಿ ಮತ್ತು ರೂ.211.96 ಲಕ್ಷಗಳನ್ನು ಯೋಜನೇತರ ಅಡಿಯಲ್ಲಿ ವಿವಿಧ ಕ್ರೀಡೆ ಮತ್ತು ಯುವಜನ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಇಲಾಖೆಗೆ ಒದಗಿಸಲಾಗಿದೆ.

ಜಿಲ್ಲಾ ಪಂಚಾಯತ್ ಅಡಿಯಲ್ಲಿ ರೂ.324.00 ಲಕ್ಷಗಳನ್ನು ಯೋಜನೆಯಡಿಯಲ್ಲಿ ಮತ್ತು ರೂ.48.27 ಲಕ್ಷಗಳನ್ನು ಯೋಜನೇತರ ಅಡಿಯಲ್ಲಿ ವಿವಿಧ ಕ್ರೀಡೆ ಮತ್ತು ಯುವಜನ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಒದಗಿಸಲಾಗಿದೆ.

ಈವರಗೆ ರಾಜ್ಯ ವಲಯದಲ್ಲಿ ರೂ. 5,40,688-00 ಗಳನ್ನು ವೆಚ್ಚ ಮಾಡಲಾಗಿದೆ.

ಆ), ಇ) ಈ ಇಲಾಖೆಗೆ ಸಂಬಂಧಿಸಿರುವುದಿಲ್ಲ.

ಖಾಸಗಿ ಐ.ಟಿ.ಐ ನೌಕರರಿಗೆ ಅನುದಾನ.

1606(2325) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :— ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸರ್ಕಾರದ ಶಾಲಾ ಕಾಲೇಜುಗಳಿಗೆ ಶೇಕಡಾ 100ರ ಅನುದಾನ ಮತ್ತು ನಿವೃತ್ತಿ ಸೌಲಭ್ಯಗಳನ್ನು ಕೊಡುತ್ತಿದ್ದು, ಖಾಸಗೀ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಕೊಡದಿರಲು ಕಾರಣಗಳೇನು;

ಅ) ಶೇಕಡ 25ನ್ನು ಆಡಳಿತ ಸಂಸ್ಥೆ ನೀಡಬೇಕೆನ್ನುವದು ನಿಜವೇ?

ಇ) ಹಾಗಿದಲ್ಲಿ, ಖಾಸಗೀ ಆಡಳಿತ ಸಂಸ್ಥೆ ಅಥವಾ ಸರ್ಕಾರ ಈ ವ್ಯವಸ್ಥೆಯನ್ನು ಸರಿಪಡಿಸುವರೇ?

ಶ್ರೀ ಕೆ. ಅಮರನಾಥ ಶೆಟ್ಟಿ (ಕಾರ್ಮಿಕ ರಾಜ್ಯ ಸಚಿವರು) :—

ಅ) ಶಾಲಾ ಕಾಲೇಜುಗಳನ್ನು ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಹೋಲಿಸುವುದು ಸಮಂಜಸವಲ್ಲ. ಶಾಲಾ, ಕಾಲೇಜುಗಳಿಗೆ ಇರುವ ಅನುದಾನ ಸಂಹಿತೆ ಮತ್ತು ವೃತ್ತಿ ಶಿಕ್ಷಣಕ್ಕೆ ಇರುವ ಅನುದಾನ ಸಂಹಿತೆ ಬೇರೆ ಬೇರೆಯಾಗಿದೆ. ಆದುದರಿಂದ ಶಾಲಾ ಕಾಲೇಜುಗಳಿಗೆ ಕೊಡುವ ಶೇ.100 ಅನುದಾನ ಮತ್ತು ಇತರೆ ಸೌಲಭ್ಯಗಳನ್ನು ವೃತ್ತಿ ಶಿಕ್ಷಣ ಸಂಸ್ಥೆ (ಖಾಸಗಿ ಕೈಗಾರಿಕಾ ಸಂಸ್ಥೆಗಳಿಗೆ ವಿಸ್ತರಿಸಲು ಸಾಧ್ಯವಿಲ್ಲ.

ಆ) ಹೌದು.

ಇ) ಉದ್ಭವಿಸುವುದಿಲ್ಲ.

ನಬಾರ್ಡ್‌ನಿಂದ ಮಂಜೂರಾದ ಕಾಮಗಾರಿಗಳ ನಿರ್ಮಾಣ.

1607(2326) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಉಡುಪಿ ಜಿಲ್ಲೆಯಲ್ಲಿ ನಬಾರ್ಡ್‌ನಿಂದ ಮಂಜೂರಾದ ಲೋಕೋಪಯೋಗಿ ಇಲಾಖೆ (ಮಲೆನಾಡು ಮೀನುಗಾರಿಕೆ) ಕಾಮಗಾರಿಗಳು ಯಾವುವು? (ತಾಲ್ಲೂಕುವಾರು ಕಾಮಗಾರಿ ಮತ್ತು ಅಂದಾಜು ತಿಳಿಸುವುದು)

ಆ) ಟೆಂಡರ್ ಕರೆಯಲಾದ ಕಾಮಗಾರಿಗಳು ಯಾವುದು, ಉಳಿದ ಕಾಮಗಾರಿಗಳ ಬಗ್ಗೆ ಯಾವಾಗ ಟೆಂಡರ್ ಕರೆಯಲಾಗುವುದು?

ಶ್ರೀ ಉಮೇಶ್ ವಿ. ಕತ್ತಿ (ಲೋಕೋಪಯೋಗಿ ಸಚಿವರು) :—

ಅ) ಉಡುಪಿ ಜಿಲ್ಲೆಯಲ್ಲಿ ನಬಾರ್ಡ್‌ನಿಂದ ಮಂಜೂರಾದ ಮೀನುಗಾರಿಕೆ ಇಲಾಖೆಯ ಕಾಮಗಾರಿಗಳ ತಾಲ್ಲೂಕುವಾರು ವಿವರ ಕೆಳಕಂಡಂತೆ ಇದೆ.

ತಾಲ್ಲೂಕು	ಕಾಮಗಾರಿಯ ಹೆಸರು	ಅಂದಾಜು ಮೊತ್ತ
ಉಡುಪಿ	1) ತೊಟ್ಟಿಂಕೋಡಿ ಬೇಂಗ್ರೆ ರಸ್ತೆ	9.13 ಲಕ್ಷ
	2) ಉಪ್ಪಿನಕೋಟೆ ಹೊನ್ನಾಲ ರಸ್ತೆ	8.04 ಲಕ್ಷ
ಕುಂದಾಪುರ	1) ಮಹಾಲಿಂಗೇಶ್ವರ ಕುಂಭಾಷಿ ರಸ್ತೆ	16.01 ಲಕ್ಷ
	2) ಉಪ್ಪುಂದ ಕರಾವಳಿ ರಸ್ತೆ	11.00 ಲಕ್ಷ